ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 557/2023

ಸಿ ಡಬ್ಲ್ಯೂ-11
ಪಿ ಡಬ್ಲ್ಯೂ-7

ದಿಃ 10-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಮಂಜುನಾಥ ನಾಯಕ
ತಂದೆಯ ಹೆಸರುಃ ಮನೋಹರ
ವಯಸ್ಸುಃ 41 ವರ್ಷ
ಉದ್ಯೋಗಃ ಗ್ಯಾರೇಜ್ ಕೆಲಸ
ವಿಳಾಸಃ ಬಾವಿಕೇರಿ, ಅಂಕೋಲಾ

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಚಾಸಾ-9 ಮತ್ತು 10 ರವರು ಪರಿಚಯವಿರುತ್ತದೆ. ದಿಃ12-04-2023 ರಂದು ನಾನು ರಾತ್ರಿ 8.30 ಗಂಟೆಯ ಸಮಯದಲ್ಲಿ ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ರಸ್ತೆಯಿಂದ ಒಂದು ಶಬ್ದ ಬಂದಿರುತ್ತದೆ. ಆಗ ನಾನು ಮತ್ತು ಅಮೀತ್ ಇವರು ಹೋಗಿ ನೋಡಿರುತ್ತೇವೆ. ಅಲ್ಲಿ ಒಬ್ಬ ಹೆಂಗಸು ಬಿದ್ದುಕೊಂಡಿದ್ದರು. ಅವರು ರಿಕ್ಷಾ ಅಪಘಾತದಿಂದ ಬಿದ್ದಿದ್ದು, ಅವರಿಗೆ ಪ್ರಜ್ಞೆ ಇರಲಿಲ್ಲ. ರೀಪೇರಿಗೆ ಬಂದ ವಾಹನದ ಮುಖಾಂತರ ನಾನು ಮತ್ತು ಚಾಸಾ-1 ರವರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಏನಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. ರೀಕ್ಷಾ ಸಂಖ್ಯೆ ಹೇಳಲು

ಬರುವುದಿಲ್ಲ. ನಾನು ಹೋದ ಸ್ಥಳದಲ್ಲಿ ರಿಕ್ಷಾ ಇದ್ದ ಬಗ್ಗೆ ನಾನು ಗಮನವನ್ನು ಹರಿಸಿರುವುದಿಲ್ಲ. ಆರೋಪಿತರನ್ನು ಗುರುತಿಸುವಲ್ಲಿ ಸಾಕ್ಷಿಯು ವಿಫಲರಾಗಿರುತ್ತಾರೆ. ಅಪಘಾತವು ಯಾವ ಕಾರಣದಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಆ ಸಮಯದಲ್ಲಿ ಕೆಲಸ ಮಾಡುತ್ತಿದ್ದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಆಸ್ಪತ್ರೆಗೆ ಕರೆದುಕೊಂಡು ಹೋದ ಮಹಿಳೆಗೆ ಎಲ್ಲಿ ಗಾಯವಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನಂತರ ನಾನು ಮನೆಗೆ ಬಂದಿದ್ದು, ಏನು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಎ.ಪಿ.ಪಿ ರವರಿಂದಃ

2. ಆ ದಿನ ನೀವು ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡುತ್ತಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ-9,10 ಮತ್ತು ನೀವು ಮಾತನಾಡುತ್ತಾ ನಿಂತುಕೊಂಡ ಸಮಯದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಆಟೋ ರಿಕ್ಷಾ ನಂ. ಕೆ ಎ 30 ಎ 5087 ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಆಟೋ ರಿಕ್ಷಾದ ಚಾಲಕನು ಫಿರ್ಯಾದಿಯ ಹೆಂಡತಿಗೆ ಅಪಘಾತಪಡಿಸಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಆಗ ನೀವು ಮತ್ತು ನಿಮ್ಮ ಜೊತೆ ಇದ್ದ ಸ್ನೇಹಿತರು ಎಲ್ಲರೂ ಸೇರಿಕೊಂಡು ಉಪಚಾರ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಅಪಪಘಾತಕ್ಕೆ ಆಟೋ ರಿಕ್ಷಾ ಚಾಲಕನ ಅತಿ

ವೇಗ ಹಾಗೂ ಅಜಾಗರೂಕತೆಯ ಕಾರಣದಿಂದ ಆಗಿರುತ್ತದೆ ಎಂದು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹ, ನೀವೆ ಫಿರ್ಯಾದಿಯ ಹೆಂಡತಿಗೆ ಉಪಚರಿಸಲು ಸಹಾಯ ಮಾಡಿದರೂ ಸಹ, ಆಟೋ ಚಾಲಕನಾಗಿದ್ದ 1ನೇ ಆರೋಪಿಯು ಓಡಿ ಹೋಗಿರುವುದನ್ನು ನೋಡಿದರೂ ಸಹ, ಈ ವಿಚಾರಕ್ಕೆ ಸಂಬಂಧಪಟ್ಟು ಪೋಲೀಸರಿಗೆ ಹೇಳಿಕೆಯನ್ನು ನೀಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ನೀವು ಏನು ಕಲಿತಿರುತ್ತೀರಿ ಎಂದರೆ ಸಾಕ್ಷಿಯು 7ನೇ ತರಗತಿ ಕಲಿತಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಗ್ಯಾರೇಜ್ ಇರುತ್ತದೆ ಎಂದರೆ ಸಾಕ್ಷಿಯು ಕಾರ್ ಗ್ಯಾರೇಜ್ ಎಂದು ನುಡಿಯುತ್ತಾರೆ. ಅಲ್ಲಿ ರಿಪೇರಿ ಪಂಚರ್ ತೆಗೆಯುವುದು ಹಾಗೂ ವಾಶ್ ಮಾಡುವುದು ಮಾಡುತ್ತೇವೆ. ಗ್ಯಾರೇಜ್ ನಡೆಸಲು ಅನುಮತಿ ಬೇಕಾಗಿದ್ದು, ನಿಮ್ಮ ಹತ್ತಿರ ಇರುವುದಿಲ್ಲ ಎಂದು ನುಡಿಯುತ್ತಾರೆ. ಗ್ಯಾರೇಜ್ ನಡೆಸಲು ನಿಮ್ಮ ಹತ್ತಿರ ವಿದ್ಯಾರ್ಹತೆ ಬೇಕಾಗಿದ್ದು, ಅದೂ ಸಹ ನಿಮಗೆ ಬೇಕು ಎಂದರೆ ಸರಿ. ಗ್ಯಾರೇಜ ಇರುವ ಜಮೀನು ಯಾರದ್ದು ಎಂದರೆ ಸಾಕ್ಷಿಯು ನನ್ನ ಅಜ್ಜ ರುವಾ ಶಿವನಾಥ ನಾಯ್ಕ ಇವರದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಗ್ಯಾರೇಜ್ ಇದ್ದ ಬಗ್ಗೆಯಾಗಲಿ ಅಥವಾ ಗ್ಯಾರೇಜ್

ಜಮೀನು ಇದ್ದ ಬಗ್ಗೆಯಾಗಲಿ ಪೊಲೀಸರು ಏನಾದರೂ ವಿಚಾರಣೆ ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗ್ಯಾರೇಜ್ ನಲ್ಲಿ ಯಾವ ಯಾವ ಕಾರುಗಳು ಬಂದಿರುತ್ತವೆ ಹಾಗೂ ಹೋಗಿರುತ್ತವೆ ಎನ್ನುವುದರ ಬಗ್ಗೆ ರಜಿಷ್ಟನ್ನು ಮೆಂಟೇನ್ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಯಾರ ಕಾರಿನಲ್ಲಿ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ಚಿಕ್ಕಪ್ಪನ ಮಹೇಶ ಸೀತಾರಾಮ ಗೌಡ ಇವರ ಕಾರಿನಲ್ಲಿ ಎಂದು ನುಡಿಯುತ್ತಾರೆ. ಮಹೇಶನಿಗೆ ಏನಾದರೂ ನಿಮ್ಮ ಕಾರನ್ನು ಒಯ್ಯುವುದರ ಬಗ್ಗೆ ಕೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅಪಘಾತವಾಗಿದೆ ಎಂದು ಹೇಳುವ ಸ್ಥಳದಿಂದ ಗ್ಯಾರೇಜ ಎಷ್ಟು ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು 100 ಮೀಟರ್ ಅಂತರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಗ್ಯಾರೇಜ್ ಬೆಲೆಕೇರಿ ರಸ್ತೆಯ ಯಾವ ಬದಿಗೆ ಬರುತ್ತದೆ ಎಂದರೆ ಎಡಬದಿಗೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸ್ಥಳದಿಂದ ನಿಮ್ಮ ಗ್ಯಾರೇಜ್ ಯಾರ ಕಡೆ ಇತ್ತು ಎಂದರೆ ಸಾಕ್ಷಿಯು ಬೆಲೆಕೇರಿ ಕಡೆಗೆ ಇತ್ತು ಎಂದು ನುಡಿಯುತ್ತಾರೆ.

4. ನಿಮ್ಮ ಪ್ರಕಾರ ಗಾಯಾಳು ರಸ್ತೆಯ ಮೇಲೆ ಬಿದ್ದಿದ್ದರಾ ಅಥವಾ ಕಚ್ಚಾ ರಸ್ತೆಯ ಮೇಲ ಬಿದ್ದದ್ದರಾ ಎಂದರೆ ಸಾಕ್ಷಿಯು ಮಣ್ಣಿನ ರಸ್ತೆಯ ಮೇಲೆ ಎಂದು ನುಡಿಯುತ್ತಾರೆ. ಡಾಂಬರು ರಸ್ತೆಯ ಅಂಚಿನಿಂದ ಎಷ್ಟು ದೂರದಲ್ಲಿ ಬಿದ್ದಿದ್ದರು ಎಂದರೆ ಸಾಕ್ಷಿಯು ನಾನು ಲಕ್ಷ್ಯ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನೀವು ನೋಡಿದಾಗ ಮುಖ

ಕೆಳಗಡೆ ಮಾಡಿ ಬಿದ್ದಿದ್ದರಾ ಅಥವಾ ಮುಖ ಮೇಲೆ ಇತ್ತಾ ಸಾಕ್ಷಿಯ ಲಕ್ಷ್ಯ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಎಲೆಕ್ಟ್ರಿಕ್ ಕಂಬ ಇದ್ದಿದ್ದರ ಬಗ್ಗೆ ನೋಡಿರುತ್ತೀರಾ ಎಂದರೆ ಸಾಕ್ಷಿಯು ಲಕ್ಷ್ಯ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನೀವು ಚಾಸಾ-1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚೆಕ್ ಬೌನ್ಸ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಸಾಕಷ್ಟು ಬಾರಿ ನ್ಯಾಯಾಲಯಕ್ಕೆ ಬಂದು ಹೋಗಿರುತ್ತೀರಿ ಎಂದರೆ ಸರಿ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.